**ಓ ಎಸ್ ನಂಃ 194/2020**
**ಪಿ ಡಬ್ಲ್ಯೂ ಃ 1**

**ದಿಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಹೆಚ್ ಎಂ ಎಸ್ ವಕೀಲರಿಂದಃ-**

ಮಲ್ಲೂರು ಗ್ರಾಮದ ಸರ್ವೆ ನಂ. 46 ರ ಜಮೀನಿನ ಒಟ್ಟು ವಿಸ್ತೀರ್ಣ 8 ಎಕರೆ 9 ಗುಂಟೆ ಜಮೀನು. ಸದರಿ ಜಮೀನು ಮುಲತಃ ನರಸಿಂಹಯ್ಯ ಉರುಫ್ ಪಾಪಯ್ಯನವರ ತಂದೆ ರಂಗನರಸಿಂಹಯ್ಯನವರಿಗೆ ಸೇರಿದ ಸ್ವತ್ತು ಎಂದರೆ ಸರಿ. ರಂಗನರಸಿಂಹಯ್ಯನವರಿಗೆ 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ರಂಗನರಸಿಂಹಯ್ಯನವರಿಗೆ 4 ಜನ ಮಕ್ಕಳಿದ್ದು 1) ಗಂಗನರಸಿಹಯ್ಯ 2) ಪಿಳ್ಳಯ್ಯ 3) ರಂಗಯ್ಯ 4) ರಾಮಯ್ಯ ಎಂದರೆ ನನಗೆ ಗೊತ್ತಿಲ್ಲ. ಮಲ್ಲೂರು ಗ್ರಾಮದ ಸರ್ವೆ ನಂ. 46 ರ 8 ಎಕರೆ 9 ಗುಂಟೆ ಜಮೀನನ್ನು ರಂಗನರಸಿಂಹಯ್ಯನವರ 4 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗದಲ್ಲಿ 2 ಎಕರೆ 20 ಗುಂಟೆ ಜಮೀನು ರಾಮಯ್ಯರವರ ಹಿಸ್ಸೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 2 ಎಕರೆ 20 ಗುಂಟೆ ಜಮೀನನ್ನು ರಾಮಯ್ಯನವರು ಮತ್ತು ಆತನ ತಂದೆಯವರು ಸೇರಿ ದಿಃ 01.11.1967 ರಲ್ಲಿ ಡಿ ಆರ್ ಮೂರ್ತಿ ರವರಿಗೆ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಿ ಆರ್ ಮೂರ್ತಿ ರವರು ಸದರಿ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಗಂಗನರಸಿಂಹಯ್ಯನವರು ಸರ್ವೆ ನಂ. 46 ರಲ್ಲಿ 2 ಎಕರೆ 28 ಗುಂಟೆ ಜಮೀನನ್ನು ಡಿ ಆರ್ ಮೂರ್ತಿ ರವರಿಗೆ ದಿಃ 18.08.1969 ರಲ್ಲಿ ಕ್ರಯಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಮೇಲ್ಕಂಡ ಸ್ವತ್ತಿನಲ್ಲಿ ಡಿ ಆರ್ ಮೂರ್ತಿ ರವರು ಕ್ರಯಕ್ಕೆ ಪಡೆದ ದಿನಾಂಕದಿಂದಲೂ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮಲ್ಲೂರು ಗ್ರಾಮದ ಸರ್ವೆ ನಂ. 46 ರ ಜಮೀನಿಗೆ ಸಂಬಂಧಪಟ್ಟಂತೆ ಸ್ವಾಧೀನತೆ ಬಗ್ಗೆ ಮತ್ತು ಪೋಡಿ ವಿಚಾರಕ್ಕೆ ಸಂಬಂಧಪಟ್ಟಂತೆ ತಕರಾರು ಇದ್ದು ಸಕ್ಷಮ ಪ್ರಾಧಿಕಾರದಲ್ಲಿ ವಿಚಾರಣೆ ನಡೆದಿದೆ ಎಂದರೆ ಸರಿ. ಎ ಡಿ ಎಲ್ ಆರ್ ರವರು ಡಿ ಡಿ ಎಲ್ ಆರ್ ಮೇಲ್ಮನವಿ ಸಂಖ್ಯೆ 31/17-18 ರ ಪ್ರಕಾರ ಮಲ್ಲೂರು ಗ್ರಾಮದ ಸರ್ವೆ ನಂ.46 ರ ಜಮೀನಿಗೆ ಸಂಬಂಧಪಟ್ಟಂತೆ ಯಾರು

**ಓ ಎಸ್ ನಂಃ 194/2020**
**ಪಿ ಡಬ್ಲ್ಯೂ ಃ 1**

ಯಾರು ಅನುಭವದಲ್ಲಿದ್ದಾರೊ ಅವರವರ ಸ್ವಾಧೀನವನ್ನು ಗುರುತಿಸಿ ಅವರವರ ಹೆಸರಿಗೆ ಹೊಸ ಸರ್ವೆ ನಂಬರ್ ಗಳನ್ನು ಹಾಗೂ ವಿಸ್ತೀರ್ಣವನ್ನು ಮಾಡುವಂತೆ ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೋಜಣಿ ಅಧಿಕಾರಿಯು ಸದರಿ ಆದೇಶದ ಅನ್ವಯ ಸ್ಥಳಕ್ಕೆ ಬಂದು ಮೋಜಣಿ ಹದ್ದು ಬಸ್ತನ್ನು ನಿಗದಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 46 ರ ಜಮೀನನ್ನು ಪೋಡಿ ಮಾಡಿ ಹೊಸ ಸರ್ವೆ ನಂ. 46/1 ವಿಸ್ತೀರ್ಣ ಜಮೀನನ್ನು ಜಗದೀಶ, ಶಿಲ್ಪಶ್ರೀ ಮತ್ತು ಶಶಿಧರ್ ರವರ ಹೆಸರಿಗೆ ಜಂಟಿಯಾಗಿ ಖಾತೆಯನ್ನು ನಮೂದು ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ. 46/2 ರ ಜಮೀನಿನಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಡಿ ಆರ್ ಮೂರ್ತಿ ರವರ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 46/3 ರ ಜಮೀನಿನಲ್ಲಿ 1 ಎಕರೆ 9 ಗುಂಟೆ ಜಮೀನನ್ನು ರಂಗನರಸಿಂಹಯ್ಯ ರವರಿಗೆ ಹಾಗೂ 33 ಗುಂಟೆ ಜಮೀನನ್ನು ವಾದಿಯ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ. 46/4 ರ ಒಟ್ಟು ವಿಸ್ತೀರ್ಣ 2 ಎಕರೆ 31 ಗುಂಟೆ ಜಮೀನನ್ನು 3 ಗುಂಟೆ ಖರಾಬನ್ನು ಹೊರತು ಪಡಿಸಿ 2 ಎಕರೆ 28 ಗುಂಟೆ ಜಮೀನು ಡಿ ಆರ್ ಮೂರ್ತಿ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**